ಅವಳು ಅವರಿಬ್ಬರನ್ನು ದಿಟ್ಟಿಸಿ ನೋಡಿದಳು. ತರುವಾಯ, 'ಈ ರಸ್ತೆ ಎಲ್ಲಿಗೂ ಹೋಗುವುದಿಲ್ಲ; ಜನರು ಇದರ ಮೇಲೆ ನಡೆದು ಹೋಗುತ್ತಾರೆ, ಅಷ್ಟೇ! ಅದು ಸರಿ, ನೀವು ಯಾರು?' ಎಂದು ಪ್ರಶ್ನಿಸಿದಳು.

'ನಾವು ಯಾತ್ರಿಕರು ತಾಯೀ!' ಎಂದು ಮಹಾಕವಿ ಮಾಘ ಜಾಣತನದಿಂದ ಹೇಳಿದ.

'ನೀವು... ಯಾತ್ರಿಕರಾ?! ಈ ಜಗತ್ತಿನಲ್ಲಿ ಸೂರ್ಯಚಂದ್ರರು ಇಬ್ಬರೇ ಯಾತ್ರಿಕರು! ನೀವು ಹೇಗೆ ಯಾತ್ರಿಕರಾಗಲು ಸಾಧ್ಯ? ತಮಾಷೆ ಮಾಡದೆ ನೀವು ಯಾರೆಂದು ಹೇಳಿ!' ಎಂದಳು ಮುದುಕಿ.

ಮಾಘಕವಿ ಸ್ವಲ್ಪ ಯೋಚಿಸಿ, 'ನಾವು ಅನಿತ್ಯವಾದ ಜೀವನವುಳ್ಳ ಮನುಷ್ಯರು!' ಎಂದ.

'ಅನಿತ್ಯ ಜೀವನದ ಮನುಷ್ಯರಾ? ಪ್ರಪಂಚದಲ್ಲಿ ಅನಿತ್ಯವಾದುವು ಎರಡೇ! ಒಂದು ಶ್ರೀಮಂತಿಕೆ; ಇನ್ನೊಂದು ಯೌವನ!' ಎಂದ ಮುದುಕಿ ಮುಗುಳ್ನಕ್ಕಳು.

ಮಾಘಕವಿಯ ಮುಖದಲ್ಲಿ ಸೋಲಿನ ಚಿನ್ಹೆಗಳು! ಆದರೂ ಸಂಭಾಳಿಸಿಕೊಂಡು, 'ನಾವು ರಾಜರು' ಎಂದರು.

'ರಾಜರು ಇಬ್ಬರೇ! ಒಬ್ಬ ಚಂದ್ರ; ಮತ್ತೊಬ್ಬ ಯಮಧರ್ಮರಾಜ. ಹಾಗಿರುವಾಗ ನೀವು ಹೇಗೆ ರಾಜರಾಗುವಿರಿ? ನಾನಿದನ್ನು ನಂಬಲಾರೆ!' ಎಂದಳು.

ಇವಳು ಸಾಧಾರಣ ಮುದುಕಿಯಲ್ಲ ಎಂದು ಅವರಿಗೆ ಗೊತ್ತಾಯಿತು. 'ಅಮ್ಮಾ! ನಾವು ತಾಳ್ಮೆಯನ್ನು ಭೂಷಣವಾಗಿ ಕೊಂಡವರು!' ಎಂದು ಬಹಳ ಎಚ್ಚರಿಕೆಯಿಂದ ಹೇಳಿದ ಮಾಘ.

'ಅಪ್ಪಾ! ತಾಳ್ಮೆಯ ಪ್ರತೀಕ ಒಂದು ಭೂಮಿದೇವಿ; ಇನ್ನೊಂದು ಮನುಷ್ಯ ಸ್ತ್ರೀ. ನೀವಂತೂ ಇವೆರಡೂ ಅಲ್ಲ!' ಎಂದಳು.

ಈಗ ಮಾಘಕವಿಗೆ ಭಯವಾಯಿತು. 'ನಾವು ಪರದೇಶಿಗಳು!' ಎಂದು ಹೇಳಿದನು.

'ಇಲ್ಲದ್ದೆಲ್ಲ ಹೇಳ ಬೇಡಿ! ಪರದೇಶಿಯೆಂದರೆ ಒಂದೂ ಹುಟ್ಟ ಬೇಕು; ಇಲ್ಲ ಸಾಯಬೇಕು. ಹುಟ್ಟುವುದು ಯಾವುದಾದರೂ ಪರದೇಶಕ್ಕೆ ಬರುತ್ತೆ. ಸಾಯುವುದು ಪರದೇಶಕ್ಕೆ ಹೋಗುತ್ತದೆ.'

ಮಾಘಕವಿ ಮತ್ತು ಭೋಜರಾಜ ತಮ್ಮ ಸೋಲನ್ನು ಒಪ್ಪಿಕೊಂಡು, 'ನಾವು ನಿನ್ನ ಹತ್ತಿರ ಸೋತೆವು, ತಾಯೇ!' ಎಂದು ನಮ್ರತೆಯಿಂದ ಹೇಳಿದರು.

ಅವರ ಮಾತುಗಳಲ್ಲಿ ಮುದುಕಿ ಇದನ್ನೂ ಒಪ್ಪಲಿಲ್ಲ! 'ಸೋಲುವವರು ಇಬ್ಬರೇ! ಒಬ್ಬ ಸಾಲ ಮಾಡಿದವನು; ಇನ್ನೊಬ್ಬ ಹೆಣ್ಣು ಹಡೆದ ತಂದೆ! ಅದಿರಲಿ! ಈಗಲಾದರೂ ನಿಜ ಹೇಳಿ!' ಎಂದಳು ಆ ಮುದುಕಿ!

ರಾಜ ಮತ್ತು ಕವಿ ತಲೆ ತಗ್ಗಿಸಿ ಮೌನವಾಗಿ ನಿಂತರು. ಮುದುಕಿಯ ಸುಕ್ಕುಗಟ್ಟಿದ ಮುಖದಲ್ಲಿ ಮಂದಹಾಸ ಮಿನುಗಿತು. 'ನೀವು ಯಾರು ಎಂಬುದು ಮೊದಲೇ ನನಗೆ ಗೊತ್ತಾಗಿದೆ! ಒಬ್ಬರು ಭೋಜರಾಜ; ಇನ್ನೊಬ್ಬರು ಮಾಘಕವಿ! ಈ ರಸ್ತೆ ನೇರವಾಗಿ ಉಜ್ಜಯಿನಿಗೆ ಹೋಗುತ್ತದೆ' ಎಂದು ನಗುತ್ತಲೇ ಅವರಿಗೆ ದಾರಿ ತೋರಿಸಿದಳು!

**● ಕೆ. ನಿರುಪಮಾ,**
**ಬೆಂಗಳೂರು**